Krishi mela draws 1.6L farmers on Day One

Focus on agricultural startups and innovations in farming

BENGALURU, DHNS

Rows and rows of stalls displaying manure, agriculture machinery, seeds and innovations drew in a crowd of 1.6 lakh farmers from across Karnataka on the first day of the Krishi Mela 2022 at the Gandhi Krishi Vigyan Kendra here on Thursday.

Even rain-induced slush and traffic jams did not seem to throw a wet blanket on the event. In total, transactions totaling to Rs 1.12 crore were reported on the day. Some of the areas that were bustling with people included agricultural engineering and self help groups.

The four-day mela, focused on showcasing agricultural start-ups and innovators in the farming sector, was inaugurated by Governor Thawar Chand Gehlot.

"The response has been better than what we received last year despite the weather. The past two years we had low key melas. We are expecting bigger crowds on the weekend," K Shivaram, a professor at the University of Agricultural Sciences Bangalore. Last year, the mela saw a footfall of 1.2 lakh people.

Though the cattle show was ostensibly absent this year, the poultry and sheep still drew interest.

Farmer Chandregowda, who had travelled to the city from Tumakuru, said he made an effort to attend the mela every year, however Covid had put a damper.

Coming back after two years he says the mela is a good way to keep up to date with new technology in agriculture,

"I am particularly interested in looking for new harvesting and manure solutions. The mela is also a good way to meet other farmers and discuss what methods are working," he said.

Another farmer from Chikkaballapur, who grows vegetables in a polyhouse, was interested in an automated hydroponic system that would save him the cost of labour. "I had been following the brand online and I am glad the mela provided me with an opportunity to actually see a model and learn about it a bit more," said Naveen.

Among the new technologies that drew interest at the mela were drones that could measure the health and growth of plants and automate pesticide spraying based on requirement.

In light of difficulties in navigating through the fair, the university has taken measures to waterproof all stalls and cover puddles and slush with sawdust to help visitors.



Visitors at one of the stalls at the Krishi Mela at Gandhi Krishi Vigyan Kendra in Bengaluru on Thursday. DH PHOTO/KRISHNA KUMAR P S

04-11-2022 Dec Hrd Pg 04

04-11-2022 V-Karnataka Pg 06

ನೆಟ್ಟ ಒಂದೇ ವರ್ಷಕ್ಕೆ ಫಸಲು ನೀಡುವ ನೆದರ್ಲೆಂಡ್ ಸರ್ವಋತು ಹಲಸು!

ಬೆಂಗಳೂರು: ನಾಟಿ ಮಾಡಿದ ಒಂದು ವರ್ಷದಲ್ಲೇ ಕಾಯಿ ಬಿಡುವ ನೆದರ್ಲೆಂಡ್‌ನ ಸರ್ವಋತು ಹಲಸು ಕೃಷಿ ಮೇಳದಲ್ಲಿ ರೈತರನ್ನು ಸೆಳೆಯುತ್ತಿದೆ. ಹಲಸಿನ ಮರಗಳು ಸಾಮಾನ್ಯವಾಗಿ ಎತ್ತರಕ್ಕೆ ಬೆಳೆಯುತ್ತವೆ. ಆದರೆ, ಈ ಹಲಸು ಕಡಿಮೆ ಎತ್ತರದಲ್ಲಿ ಪೊದೆಯಾಕಾರದಲ್ಲಿ ಹರಡಿಕೊಳ್ಳುವುದು ವಿಶೇಷ. ನರ್ಸರಿಗಳಲ್ಲಿ ಸುಮಾರು ಒಂದು ವರ್ಷ ಕಾಲ ಬೆಳೆಸಿಟ್ಟ ಸಸಿಗಳನ್ನು ರೈತರು ನೆಟ್ಟರೆ ಒಂದು ವರ್ಷದಲ್ಲಿ ಇದು ಕಾಯಿ ಬಿಡಲಾರಂಭಿಸುತ್ತದೆ. ಇದು ಅಂಟು ರಹಿತ ತೊಳೆಗಳನ್ನು ಹೊಂದಿದ್ದು, ಸಿಹಿಯಾಗಿರುತ್ತವೆ. ಮಕ್ಕಳಿಂದ ವೃದ್ಧರವರೆಗೆ ತಿನ್ನಬಹುದಾದ ಬಹುಪೌಷ್ಟಿಕ ಹಲಸಾಗಿದೆ. ಒಂದು ಮರ ಸುಮಾರು 5 ವರ್ಷಗಳ ಕಾಲ 20–30 ಹಣ್ಣುಗಳನ್ನು ಬಿಡಲಾರಂಭಿಸಿ, ನಂತರ ಹೆಚ್ಚುತ್ತಾ ಹೋಗುತ್ತದೆ ಎನ್ನುತ್ತಾರೆ ಸಸಿ ಮಾರಾಟಗಾರ ಪುತ್ತೂರಿನ ಗ್ರೀನ್ ವರ್ಲ್ಡ್ ನರ್ಸರಿಯ ಫಯಾಜ್.



ಐಸ್‌ಕ್ರೀಂ ಬೀನ್ಸ್ ಹಣ್ಣು

ಕೃಷಿ ಮೇಳಕ್ಕೆ ಹುಣಸೆಕಾಯಿ ಮಾದರಿಯಲ್ಲಿ 'ಐಸ್‌ಕ್ರೀಂ ಬೀನ್ಸ್' ಹಣ್ಣು ಬಂದಿದೆ. ಇದು ಥೇಟ್ ಹುಣಸೆಕಾಯಿ ಆಕಾರದಲ್ಲಿದ್ದು, ಹಣ್ಣಿನ ಒಳಗಡೆ ಐಸ್‌ಕ್ರೀನಂತೆ ಸಿಹಿಯಾದ ತಿರುಳು ಇರುತ್ತದೆ. ಇದು ಕೂಡ ಹೇರಳ ಪೌಷ್ಟಿಕಾಂಶಗಳನ್ನು ಹೊಂದಿದ್ದು, ಎಲ್ಲಾ ವರ್ಗದವರೂ ತಿನ್ನಬಹುದು. ಹುಣಸೆಕಾಯಿಯಂತೆ ಕಂಡರೂ ಇದು ತರಕಾರಿಯಲ್ಲ. ಆದರೆ, ಹಣ್ಣಿನ ರೂಪದಲ್ಲಿ ತಿನ್ನಬಹುದು. ಅಂದ ಹಾಗೆ ಇದು ಕೂಡ ವಿದೇಶಿ ತಳಿಯಾಗಿದ್ದು, ಒಂದು ಸಸಿಗೆ 350 ರೂ. ದರವಿದೆ. ನೆಟ್ಟ ಮೂರು ವರ್ಷಗಳಲ್ಲಿ ಇದು ಹಣ್ಣು ಬಿಡುತ್ತದೆ. ಕೃಷಿ ಮೇಳದಲ್ಲಿ ಇಂತಹ ಹೊಸ ತಳಿಯ ಹಣ್ಣಿನ ಸಸಿಗಳತ್ತ ಕೃಷಿಕರ ಚಿತ್ತ ಹೆಚ್ಚಾಗಿದೆ. ನರ್ಸರಿಗಳಲ್ಲಿ ಸ್ವದೇಶಿ ಹಾಗೂ ವಿದೇಶಿ ತಳಿಯ ಗಿಡಗಳನ್ನು ಹುಡುಕಿ ಹುಡುಕಿ ಖರೀದಿಸುತ್ತಿದ್ದ ದೃಶ್ಯ ಗುರುವಾರ ಕೃಷಿ ಮೇಳದಲ್ಲಿ ಕಂಡು ಬಂತು.



ಬಂದಿದೆ ಎಲೆ ಒಣಗಿಸುವ ವಿನೂತನ ತಂತ್ರಜ್ಞಾನ

ಮಳೆ ಹನಿ ಇದ್ದರೂ ಕೀಟನಾಶಕ ಸಿಂಪಡಣೆ!

■ **ವಿಕ ಸುದ್ದಿಲೋಕ** ಬೆಂಗಳೂರು

ಮಳೆ ಬಂದು ನಿಂತ ಕೂಡಲೇ ಬೆಳೆಗಳಿಗೆ ಕೀಟನಾಶಕ ಔಷಧಿಯನ್ನು ಸಿಂಪಡಿಸಬಹುದು!

ಮಳೆ ಬಂದಾಗ ಎಲೆಗಳ ಮೇಲೆ ನೀರು ನಿಂತಿರುತ್ತದೆ. ಹೀಗಾಗಿ, ಕೀಟನಾಶಕ ಸಿಂಪಡಿಸಿದರೂ ಅದು ನೀರಿನಲ್ಲಿ ಹೋಮ ಬೆರೆಸಿದಂತೆಯೇ ಸರಿ. ಹೀಗಿರುವಾಗ ಮಳೆ ನಿಂತ ತಕ್ಷಣ ಕೀಟನಾಶಕ ಸಿಂಪಡಣೆ ಹೇಗೆ ಅಂತೀರಾ? ಹೌದು, ಅದಕ್ಕೆಂದೇ ಹೊಸದೊಂದು ತಂತ್ರಜ್ಞಾನವನ್ನು ಕಂಡುಹಿಡಿಯಲಾಗಿದೆ. ಮಳೆ ಬಿದ್ದು ಎಲೆಗಳ ಮೇಲೆ ನೀರು ನಿಂತಿದ್ದರೆ, ಅದನ್ನು ತಕ್ಷಣ ಒಣಗಿಸುವ ವ್ಯವಸ್ಥೆಯುಳ್ಳ ಯಂತ್ರವೊಂದು ಬಂದಿದೆ. ಅದುವೇ ಬ್ಲೋವರ್.

ಚಿಕ್ಕಬಳ್ಳಾಪುರದ ರೈತ ಉದ್ಯಮಿ ಚೌಧರಿ ಎಂಬುವವರು ಈ ಬ್ಲೋವರ್ ಆವಿಷ್ಕರಿಸಿದ್ದಾರೆ. ಇದರಲ್ಲಿ 600 ಲೀಟರ್ ಸಾಮರ್ಥ್ಯದ ಔಷಧಿಗಳನ್ನು ತುಂಬಿಸಿಕೊಳ್ಳಬಹುದು. ಬೃಹತ್ ಬ್ಲೋವರ್ ಅನ್ನು ಟ್ರ್ಯಾಕ್ಟರ್‌ಗೆ ಜೋಡಿಸಿಕೊಂಡು ದೊಡ್ಡಮೊಟ್ಟದ ಬೆಳೆಗಳಿಗೆ ಅತ್ಯಂತ ಕ್ಷಿಪ್ರವಾಗಿ ಕೀಟನಾಶಕ ಸಿಂಪಡಿಸಬಹುದು. ಅದರಲ್ಲೂ ದ್ರಾಕ್ಷಿ, ದಾಳಿಂಬೆ, ಮಾವು, ಸೀಬೆ, ಸಪೋಟದಂತಹ ಬೆಳೆಗಳಿಗೆ ಕೀಟನಾಶಕಗಳನ್ನು ಸಿಂಪಡಿಸಲು ಈ ಬ್ಲೋವರ್ ಬಹು ಉಪಯುಕ್ತವಾಗಿದೆ.



ಮಳೆ ಬಿದ್ದಾಗ ಎಲೆ ಒಣಗಿಸಿ ಕೀಟನಾಶಕ ಸಿಂಪಡಿಸುವ ಬ್ಲೋವರ್.

ಟ್ಯಾಂಕರ್ ಮಾದರಿಯ ಈ ಬ್ಲೋವರ್‌ನೊಳಗೆ ಕೀಟನಾಶಕ ಸಿಂಪಡಣೆಗೆ ಬೇಕಾದ ವಸ್ತುಗಳನ್ನು ಹಾಕಿದರೆ ಸಾಕು. ನೀರು, ಔಷಧಿಗಳನ್ನು ತಾನಾಗಿಯೇ ಗಿಡಗಳಿಗೆ ಬಿಡುತ್ತದೆ. ಇದಕ್ಕಾಗಿ ಪ್ರತ್ಯೇಕವಾದ ಕೊಳಾಯಿ ಮಾದರಿಯ ವ್ಯವಸ್ಥೆ ಮಾಡಲಾಗಿದೆ. ಚಾಲಕ ಒಬ್ಬ ಸಾಕು. ನಾಲ್ಕು ಜನ ಇಡೀ ದಿನ ಮಾಡುವ ಕೆಲಸವನ್ನು ಈ ಬ್ಲೋವರ್ ಕಟ್ಟಿಕೊಂಡು ಚಾಲಕನೊಬ್ಬನೇ ಅರ್ಧ ಗಂಟೆಯಲ್ಲಿ ಕೆಲಸ ಮುಗಿಸಬಹುದು ಎನ್ನುತ್ತಾರೆ ಚೌಧರಿ.

ಸಬ್ಸಿಡಿಯೂ ಇದೆ

ಅಂದ ಹಾಗೆ ಬ್ಲೋವರ್‌ಗಳು 1.90 ಲಕ್ಷ ರೂ.ನಿಂದ ಆರಂಭವಾಗಿ, 4.50 ಲಕ್ಷ ರೂ. ವರೆಗೆ ಬೆಲೆಯಲ್ಲಿ ದೊರೆಯುತ್ತವೆ. ಇದಕ್ಕೆ ಸರಕಾರದಿಂದ ರೈತರಿಗೆ ಸಹಾಯಧನ ಕೂಡ ಸಿಗುತ್ತದೆ. ರೈತರು ಇದನ್ನು ಖರೀದಿಸಿ, ತಮ್ಮ ತೋಟದ ಕೆಲಸಗಳಿಗೆ ಬಳಸಿಕೊಂಡು, ಖಾಲಿಯಿರುವಾಗ ಗ್ರಾಮದ ಇತರ ರೈತರಿಗೆ ಬಾಡಿಗೆಗೆ ಕೊಟ್ಟು ಹಣವನ್ನೂ ಸಂಪಾದಿಸಬಹುದು ಎಂಬುದು ಕೃಷಿ ಉದ್ಯಮಿ ಚೌಧರಿ ಅವರ ಅಭಿಪ್ರಾಯ. ಈ ಯಂತ್ರವು ಕೃಷಿ ಮೇಳದ ಸ್ಟಾರ್ಟಪ್ (ನವೋದ್ಯಮ) ವಿಭಾಗದಲ್ಲಿ ರೈತರ ಗಮನಸೆಳೆಯುವ ಯಂತ್ರವಾಗಿದೆ.

04-11-2022 Udayavani Pg 06

7 ಕಡೆ ಜಲಾನಯನ ನಿರ್ವಹಣೆ ಉತ್ಕೃಷ್ಟ ಕೇಂದ್ರ

ಬೆಂಗಳೂರು: 'ರಾಜ್ಯದ ಏಳು ಕಡೆ ಜಲಾನಯನ ನಿರ್ವಹಣೆ ಸಂಬಂಧ ಉತ್ಕೃಷ್ಟ ಕೇಂದ್ರ (ಸೆಂಟರ್ ಆಫ್ ಎಕ್ಸೆಲೆನ್ಸ್ ಇನ್ ವಾಟರ್‌ಶೆಡ್) ಸ್ಥಾಪಿಸಲಾಗುತ್ತಿದ್ದು ಬೆಂಗಳೂರಿನಲ್ಲಿ ಶೀಘ್ರದಲ್ಲೇ ಪ್ರಾಯೋಗಿಕವಾಗಿ ಜಾರಿಗೊಳಿಸಲಾಗುವುದು' ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ಹೇಳಿದರು.

ಹೆಬ್ಬಾಳದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಹಮ್ಮಿಕೊಂಡ ನಾಲ್ಕು ದಿನಗಳ 'ಕೃಷಿ ಮೇಳ'ದ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಬೆಂಗಳೂರು, ಚಾಮರಾಜನಗರ, ಧಾರವಾಡ, ಗಂಗಾವತಿ, ಬಾಗಲಕೋಟೆ, ಶಿವಮೊಗ್ಗ ಸೇರಿ ಏಳು ಕಡೆ ಸೆಂಟರ್ ಆಫ್ ಎಕ್ಸೆಲೆನ್ಸ್‌ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದಕ್ಕೆ ಶೇ.15ರಷ್ಟು ಸರ್ಕಾರ ಹೂಡಿಕೆ ಮಾಡಿದರೆ, ಉಳಿದ ಶೇ. 85ರಷ್ಟು ಖಾಸಗಿ ಕಂಪನಿ ವಿನಿಯೋಗಿಸಲಿದೆ. ಇದನ್ನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಸಂಬಂಧ ಆದೇಶ ಕೂಡ ಹೊರಡಿಸಲಾಗಿದೆ' ಎಂದು ತಿಳಿಸಿದರು.

ವಿಜ್ಞಾನಿಗಳು, ಕೃಷಿ ಪ್ರಾಧ್ಯಾಪಕರ ಕಾರ್ಯವ್ಯಾಪ್ತಿ ನಾಲ್ಕು ಗೋಡೆಗಳ ಮಧ್ಯೆ ಸೀಮಿತವಾಗದೆ, ರೈತರ ಜಮೀನುಗಳಲ್ಲಿ ಕಾಣಿಸಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ಪ್ರತಿ 15 ದಿನಗಳಿಗೊಮ್ಮೆ ಸಹಾಯಕ ಪ್ರಾಧ್ಯಾಪಕರು ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ, ಅಲ್ಲಿನ ರೈತರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಬೇಕು ಎಂದರು.

ಕೋಲಾರ ಮಾದರಿ: 'ನನ್ನ ಪ್ರಕಾರ ಇಸ್ರೇಲ್‌ಗಿಂತ ಮೊದಲು ಕೋಲಾರ ರೈತರ ಮಾದರಿಯನ್ನು ಅನುಸರಿಸುವ ಅವಶ್ಯಕತೆ ಇದೆ. ಯಾಕೆಂದರೆ, ಅಲ್ಲಿ ಮಳೆ ತುಂಬಾ ಕಡಿಮೆ ಇದ್ದು, ಬಹುತೇಕ ಮಳೆಯಾಶ್ರಿತ ಪ್ರದೇಶವಾಗಿದೆ. ಅಂತರ್ಜಲಮಟ್ಟ ಸಾವಿರ ಅಡಿಗಿಂತ ಕೆಳಗೆ ಹೋಗಿದೆ. ಆದಾಗ್ಯೂ ಅಲ್ಲಿನ ರೈತರು ಗರಿಷ್ಠ ಉತ್ಪಾದನೆ ಮೂಲಕ ಗಮನಾರ್ಹ ಸಾಧನೆ ಮಾಡಿದ್ದಾರೆ. ಇದೇ ಕಾರಣಕ್ಕೆ ಪ್ರಶಸ್ತಿ ಪುರಸ್ಕೃತರು ಕೂಡ ಆ ಭಾಗದ ರೈತರೇ ಹೆಚ್ಚು ಇರುತ್ತಾರೆ' ಎಂದು ಶ್ಲಾಘಿಸಿದರು.



ಬೆಂಗಳೂರಿನಲ್ಲಿ ಹಮ್ಮಿಕೊಂಡ 4 ದಿನಗಳ 'ಕೃಷಿ ಮೇಳ'ದ ಉದ್ಘಾಟನಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಗಣ್ಯರು.

'ಕೃಷಿಯಲ್ಲಿ ಐಟಿ ಕ್ರಾಂತಿಗೆ ಸಜ್ಜಾಗಿ': ರಾಜ್ಯಪಾಲ ಥಾವರಚಂದ್ ಗೆಹಲೋತ್ ಮಾತನಾಡಿ, 'ಹಸಿರು ಕ್ರಾಂತಿ, ಕ್ಷೀರ ಕ್ರಾಂತಿಯ ನಂತರ ಈಗ ಕೃಷಿಯಲ್ಲಿ ಐಟಿ ಕ್ರಾಂತಿ ಆಗಲಿದೆ. ಅದಕ್ಕೆ ಈಗಿನಿಂದಲೇ ಮಾನಸಿಕವಾಗಿ ಸಿದ್ಧರಾಗಬೇಕು' ಎಂದು ಕರೆ ನೀಡಿದರು.

ಕೃಷಿಗೆ ಸಂಬಂಧಿಸಿದಂತೆ ಹಿಂದಿನ ಯಾವುದೇ ಕ್ರಾಂತಿಯಾದಾಗಲೂ ಬಹುದೊಡ್ಡ ಬದಲಾವಣೆಗಳಾಗಿವೆ. ಉತ್ಪಾದಕತೆ ಹೆಚ್ಚಳದ ಜತೆಗೆ ರೈತರ ಬದುಕು ಕೂಡ ಹಸನಾಗಿದೆ. ಮುಂಬರುವ ದಿನಗಳಲ್ಲಿ ಕೃಷಿಯಲ್ಲಿ ಐಟಿ ಕ್ರಾಂತಿ ಆಗುವ ಎಲ್ಲ ಸಾಧ್ಯತೆಗಳೂ ಇವೆ. ಅದಕ್ಕೆ ಈಗಿನಿಂದಲೇ ನಾವು ಸಜ್ಜಾಗಬೇಕು. ಕೃಷಿಯಲ್ಲಿ ತಂತ್ರಜ್ಞಾನಗಳ ಅಳವಡಿಕೆ ಮೂಲಕ ಮತ್ತಷ್ಟು ಪ್ರಗತಿ ಸಾಧಿಸುವ ಅವಶ್ಯಕತೆಯಿದೆ ಎಂದು ಹೇಳಿದರು.

ಈ ನಿಟ್ಟಿನಲ್ಲಿ ಇಸ್ರೇಲ್ ನಮಗೆ ಮಾದರಿಯಾಗಿದೆ ಎಂದ ರಾಜ್ಯಪಾಲರು, ಆ ದೇಶದಲ್ಲಿ ಮಳೆಯ ಪ್ರಮಾಣ ಕೇವಲ ಸರಾಸರಿ ಶೇ. 9ರಿಂದ 10ರಷ್ಟಿದೆ. ಆದರೆ, ಕೃಷಿಯಲ್ಲಿ ಅದರ ಸಾಧನೆ ಉಳಿದೆಲ್ಲ ದೇಶಗಳಿಗಿಂತ ಹೆಚ್ಚಿದೆ. ತಂತ್ರಜ್ಞಾನಗಳ ಅಳವಡಿಕೆಯಲ್ಲಿ ಇಸ್ರೇಲ್ ಸಾಕಷ್ಟು ಮುಂದಿದೆ. ಕರ್ನಾಟಕ ಕೂಡ ಕೃಷಿಯಲ್ಲಿ ಪ್ರಗತಿ ಸಾಧಿಸುತ್ತಿದೆ. ಇನ್ನಷ್ಟು ವೃದ್ಧಿ ಸಾಧಿಸಬೇಕಾಗಿದೆ. ಇದಕ್ಕಾಗಿ ಪುಷ್ಪ ಕೃಷಿ, ಔಷಧೀಯ ಉತ್ಪನ್ನಗಳ ಕೃಷಿಯ ಜತೆಗೆ ಸಮಗ್ರ ಕೃಷಿಗೆ ಒತ್ತು ನೀಡಬೇಕು ಎಂದರು. ಕುಲಪತಿ ಡಾ.ಎಸ್.ವಿ.ಸುರೇಶ್, ವಿಸ್ತರಣಾ ನಿರ್ದೇಶಕ ಡಾ.ಕೆ.ನಾರಾಯಣಗೌಡ ಮತ್ತಿತರರು ಉಪಸ್ಥಿತರಿದ್ದರು.

ನೇರ ಮಾರುಕಟ್ಟೆ: ಲಾಭಗಳಿಸಿದ ಅನ್ನದಾತರು

ಕೃಷಿ ಮೇಳದಲ್ಲಿ ಮೊದಲ ದಿನ ಪ್ರಗತಿಪರ ರೈತರಿಗೆ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪುರಸ್ಕೃತರ ವಿವರ ಹೀಗಿದೆ.

- **ಎಚ್.ಜಿ. ಗೋಪಾಲಗೌಡ:** ಮಾಜಿ ಪ್ರಧಾನಿ ದೇವೇಗೌಡ ರಾಜ್ಯಮಟ್ಟದ ಅತ್ಯುತ್ತಮ ರೈತ
- **ಸಿ. ನವಿಕ್ರಮ್:** ಡಾ.ಎಂ.ಎಚ್. ಮರೀಗೌಡ ರಾಜ್ಯಮಟ್ಟದ ತೋಟಗಾರಿಕಾ ರೈತ
- **ಎಂ. ಕವಿತಾ:** ಕೆನರಾ ಬ್ಯಾಂಕ್ ರಾಜ್ಯಮಟ್ಟದ ಅತ್ಯುತ್ತಮ ರೈತ ಮಹಿಳೆ
- **ಸಿ.ಪಿ. ಕೃಷ್ಣ:** ಕೆನರಾ ಬ್ಯಾಂಕ್ ರಾಜ್ಯಮಟ್ಟದ ಅತ್ಯುತ್ತಮ ರೈತ
- **ಎಂ.ಟಿ. ಮುನೇಗೌಡ:** ಡಾ.ಆರ್. ದ್ವಾರಕೀನಾಥ್ ಅತ್ಯುತ್ತಮ ರೈತ
- **ಡಾ.ರಾಜೇಗೌಡ:** ಡಾ.ಆರ್. ದ್ವಾರಕಿನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ

ಬೆಂಗಳೂರು: ಒಂದೆಡೆ ಕೃಷಿ ಲಾಭದಾಯಕ ಆಗುತ್ತಿಲ್ಲ ಎಂಬ ಕೊರಗಿದ್ದರೆ, ಮತ್ತೊಂದೆಡೆ ಇದಕ್ಕೆ ವ್ಯತಿರಿಕ್ತವಾಗಿ ಅದೇ ಕೃಷಿಯನ್ನು 'ಮೌಲ್ಯವರ್ಧನೆ' ಮತ್ತು 'ನೇರ ಮಾರುಕಟ್ಟೆ' ಮಂತ್ರದ ಮೂಲಕ ಎರಡರಿಂದ ಮೂರುಪಟ್ಟು ಆದಾಯ ಗಳಿಸುತ್ತಿರುವ ವರ್ಗದ ಗಾತ್ರ ದಿನದಿಂದ ದಿನಕ್ಕೆ ದೊಡ್ಡದಾಗುತ್ತಿದೆ.

ಸಾಮಾನ್ಯವಾಗಿ ರೈತರು ಬೆಳೆಗಳನ್ನು ಬೆಳೆಯಲು ಒತ್ತುಕೊಡುವ ಮೂಲಕ ಹೆಚ್ಚು ಸಮಯ ವ್ಯಯ ಮಾಡುತ್ತಾರೆ. ಆದರೆ, ಮತ್ತೊಂದು ರೈತರ ವರ್ಗ ತಾವು ಬೆಳೆದ ಬೆಳೆಗಳ ಮಾರಾಟಕ್ಕೆ ಅಧಿಕ ಸಮಯ ಮೀಸಲಿಡುತ್ತದೆ. ಇದರ ಫಲವಾಗಿ ಉಳಿದವರೆಲ್ಲ ರಿಗಿಂತ ಅಧಿಕ ಆದಾಯ ಗಳಿಸುತ್ತಿದ್ದಾರೆ. ಕೆಲವರು ವಿದೇಶಗಳಿಗೆ ರಫ್ತು ಮಾಡಿದಾಗ ಬರುವುದಕ್ಕಿಂತ ಹೆಚ್ಚು ಗಳಿಸುತ್ತಿರುವ ಉದಾಹರಣೆಗಳೂ ಇವೆ!

ದೊಡ್ಡಬಳ್ಳಾಪುರ ತಾಲೂಕಿನ ಲಕ್ಷ್ಮೀದೇವಿಪುರದ ಸಿ. ನವಿಕ್ರಮ್, ತಮ್ಮ 24 ಎಕರೆಯಲ್ಲಿ ನೂತನ ತಂತ್ರಜ್ಞಾನಗಳ ಮೂಲಕ ಹತ್ತಾರು ಪ್ರಕಾರದ ಹಣ್ಣು ತರಕಾರಿ ಬೆಳೆಯುತ್ತಿದ್ದಾರೆ. ಅದೆಲ್ಲವನ್ನೂ ಅವರು ನೇರ ಮಾರುಕಟ್ಟೆ ಮೂಲಕವೇ ಮಾರಾಟ ಮಾಡುತ್ತಿದ್ದಾರೆ. ನಾನು ಬೆಳೆದ ಉತ್ಪನ್ನಗಳನ್ನು ಮನೆಬಾಗಿಲಿಗೆ ಬರುವ ದಲ್ಲಾಳಿಗಳಿಗೆ ನೀಡುವುದಿಲ್ಲ, ಹತ್ತಿರದ ಎಪಿಎಂಸಿ ಸ್ವತಃ ತೆರಳಿ ಮಾರಾಟ ಮಾಡುತ್ತೇನೆ. ಇದರಿಂದ ಗರಿಷ್ಠ ಆದಾಯ ಬರುತ್ತಿದೆ. ಉದಾಹರಣೆಗೆ ಪಪ್ಪಾಯ ಹಣ್ಣುಗಳನ್ನು ದಲ್ಲಾಳಿಗೆ ಮಾರಾಟ ಮಾಡಿದರೆ, ಕೆಜಿಗೆ 10–15 ರೂ. ಸಿಗುತ್ತದೆ. ವಿದೇಶಕ್ಕೆ ರಫ್ತು ಮಾಡಿದಾಗ ನನಗೆ ಕೆಜಿಗೆ 35 ರೂ. ಸಿಕ್ಕಿತ್ತು. ಆದರೆ, ನಾನು ಅಥವಾ ನನ್ನತಂದೆ ಸ್ವಂತ ವಾಹನದಲ್ಲಿ ತೆಗೆದುಕೊಂಡು ಹತ್ತಿರದ ದೊಡ್ಡಬಳ್ಳಾಪುರ ಎಪಿಎಂಸಿಯಲ್ಲಿ ಮಾರಾಟ ಮಾಡಿದೆವು. ಕೆಜಿಗೆ 45 ರೂ. ಸಿಕ್ಕಿತು ಎಂದು ಹೇಳಿದರು.

ನವಿಕ್ರಮ್ ಅವರು 24 ಎಕರೆಯಲ್ಲಿ ಮಾವು, ದ್ರಾಕ್ಷಿ, ಸೀಬೆ, ದಾಳಿಂಬೆ, ಸಪೋಟ, ನೇರಳೆ, ಹಲಸು, ಡ್ರ್ಯಾಗನ್ ಫ್ರೂಟ್, ನಿಂಬೆ, ಬಾಳೆ, ಪರಂಗಿ, ಮೂಸಂಬಿ, ಸೀತಾಫಲ, ಚಕೋತ, ಅಂಜೂರ, ನೆಲ್ಲಿ, ಕಿತ್ತಳೆ, ವಾಣಿಜ್ಯ ಬೆಳೆಗಳಾದ ತೆಂಗು, ಅಡಿಕೆ, ತರಕಾರಿಗಳಾದ ಸೌತೆಕಾಯಿ, ಕೊತ್ತಂಬರಿ, ಹೂಕೋಸು, ಆಲೂಗಡ್ಡೆ, ಟೊಮೆಟೊ, ಹೀರೇಕಾಯಿ, ಹಾಗಲಕಾಯಿ, ಚೆಂಡುಹೂವು, ಸೇವಂತಿಗೆ ಬೆಳೆದು ಅಧಿಕ ಲಾಭ ಗಳಿಸುತ್ತಿದ್ದಾರೆ.

ಮದ್ದೂರಿನ ಗೂಳೂರುದೊಡ್ಡಿಯ ಸಿ.ಪಿ. ಕೃಷ್ಣ ಅವರು 24 ಎಕರೆಯಲ್ಲಿ ಹತ್ತಾರು ಪ್ರಕಾರದ ಬೆಳೆಗಳನ್ನು ಬೆಳೆದಿದ್ದಾರೆ. ಅವುಗಳಲ್ಲಿ ಬಹುತೇಕ ಉತ್ಪನ್ನಗಳ ಮೌಲ್ಯವರ್ಧನೆ ಜತೆಗೆ ನೇರ ಮಾರುಕಟ್ಟೆ ಮೂಲಕ ಮಾರಾಟ ಮಾಡುತ್ತಿದ್ದಾರೆ. ಪರಿಣಾಮ ಅಧಿಕ ಲಾಭ ಗಳಿಸುತ್ತಿದ್ದಾರೆ.

'ನಾನು ಸುಮಾರು ನಾಲ್ಕರಿಂದ ಐದು ಎಕರೆ ಜಮೀನಿನಲ್ಲಿ ಕಬ್ಬು ಬೆಳೆಯುತ್ತಿದ್ದೇನೆ. ನೈಸರ್ಗಿಕ ಕೃಷಿಯಲ್ಲಿ ಬೆಳೆದ ಈ ಕಬ್ಬನ್ನು ಬೆಲ್ಲವಾಗಿ ಪರಿವರ್ತಿಸಿ, ನೇರವಾಗಿ ಮಾರಾಟ ಮಾಡುತ್ತೇನೆ. ಇದರಿಂದ ಒಂದು ಎಕರೆಗೆ ನನಗೆ 1ರಿಂದ 1.20 ಲಕ್ಷ ರೂ. ಕಬ್ಬಿನಿಂದಲೇ ಆದಾಯ ಬರುತ್ತದೆ. ಉಳಿದ ರೈತರು ಅದೇ ಒಂದು ಎಕರೆಯಲ್ಲಿ ಅಬ್ಬಬ್ಬಾ ಎಂದರೆ 60–70 ಸಾವಿರ ರೂ. ಗಳಿಸುತ್ತಾರೆ. ಅದೇ ರೀತಿ, ಭತ್ತ, ರಾಗಿ, ಬಿಳಿಜೋಳ, ಸಾಮೆ, ನವಣೆ, ಕೊರಲೆಯಂತಹ ಧಾನ್ಯಗಳನ್ನು ಮೌಲ್ಯವರ್ಧನೆ ಮಾಡುತ್ತೇನೆ. ಸಿರಿಧಾನ್ಯಗಳಿಂದ ಹುರಿಉಂಡೆ, ಹುರಿಹಿಟ್ಟು ತೆಂಗಿನಿಂದ ತೆಂಗಿನ ಎಣ್ಣೆ ತೆಗೆದು ಮಾರಾಟ ಮಾಡುವುದು, ಮಿಟಾಯಿಗಳನ್ನು ತಯಾರಿಸಿ ಪರಿಚಯಿಸುತ್ತಿದ್ದೇನೆ. ಇದರಿಂದ ಹೆಚ್ಚು ಆದಾಯ ಬರುತ್ತಿದೆ' ಎಂದು ಹೇಳಿದರು.



Students have a field day at the inaugural of Krishi Mela at the University of Agricultural Sciences on Thursday | VINOD KUMAR T

4-DAY KRISHI MELA KICKS OFF

30 agri startups star attractions at the fair

EXPRESS NEWS SERVICE
@Bengaluru

SHOWCASING the latest technologies in the agriculture sector with special attractions on organic farming and animal husbandry, the four-day Krishi Mela kicked off at the University of Agricultural Sciences in Bengaluru on Thursday.

With the theme 'Innovations in Agriculture' as this year's theme, the mela includes 30 startups in sectors like food processing, tissue culture, crop protection, precision agriculture, agri drones, and marketing and supply chain as star attractions.

After inaugurating the event, Governor Thawarchand Gehlot praised the efforts being made to create employment, increase agricultural exports and increase farmers' income.

"Indian agriculture is still rain-fed. To get more yield, there is a need to do more detailed research on the latest technologies in agriculture, natural farming, conservation of domestic seeds . To become self-reliant in agriculture and become a global power, India needs to focus more on modernisation of agriculture, animal husbandry and food processing," he said.

Agriculture Minister BC Patil said agricultural universities should work as guides for farmers and advised professors and experts not limit themselves to universities, but go to the fields and offer guidance to farmers.

"Everyone says that the Israeli model of agriculture is the best, but our Kolar model is even superior. If this is adopted across the state, production can be doubled," he said. The governor felicitated agri achievers and unveiled the agricultural university practitioner manual. Nine new varieties of crops and 38 types of equipment were also unveiled.

Farmers awarded

Former Prime Minister H D Deve Gowda conferred the Best Farmer award on Gopal Gowda, HM Mari Gowda Award on Navikram, Canara Bank-sponsored best farmer award on C P Krishna, Best Woman Farmer award on M Kavitha. The governor and Agriculture Minister presented the Dr R Dwarkeenath Extension Worker Award to Raje Gowda.



Gemstone dealer-turned-farmer shows saplings of exotic fruits at the mela on Thursday | VINOD KUMAR T

Man leaves gemstone biz, strikes gold

MOHAMMED YACOOB @Bengaluru

ELEVEN years ago, Mohammed Adil bid adieu to his 20-year-old gemstone business and turned to his interest in growing tropical fruit plants fulltime. The decision helped him reap rich dividends as now his turnover by selling exotic saplings in Bengaluru is over Rs 1 crore annually.

The 52-year-old Devanahalli farmer grows Avocados, Macademia nuts, Rambutan, Bush Orange, Water Apple, Star Fruit and Lychee Thai Guava among others in his one-acre nursery.

"I had 4 acres of land where I had many Jamun trees. But, since the yield was less, I searched for exotic fruit trees and my journey as a farmer began 11 years ago. I converted one acre into a nursery where I grew all the mother saplings. In Avocado alone, I have 13 types with four types named after Bengaluru nursery," said Adil.

In the last five years, he has sold over a lakh Avocado saplings. "This tropical fruit is easy to grow with zero maintenance and the yield is just in three years. All one has to do is ensure good care for the first two years," said Adil.

Farmer sells a Bannur sheep for ₹2.01 lakh



Farmer Boregowda with the sheep sold at 2.01 lakh | VINOD KUMAR T

Bengaluru: A farmer sold his five-year-old Bannur sheep for a whopping Rs 2.01 lakh on the first day of Krishi Mela in Bengaluru on Thursday. According to farmers, the Bannur breed of sheep is extinct. Only Mandya district reportedly has about 2,500 such sheep. The farmer, Boregowda has brought 22 sheep including 3 month-old lambs to the Krishi Mela. The buyer is Harish Gowda, who works in a corporate firm. "I have a few ewes of the same breed and I have now bought this one for breeding as it is high time for its conservation." Boregowda said unlike last time, he dropped the idea of bringing bulls of Hallikar breed due to concern over the spread of lumpy skin disease, and has instead brought the Bannur sheep. "The stalls that sell mutton, claiming it to be of Bannur breed, may not be orginial. The breed has seven sub-types and all are facing extinction. I have been raising Bannur sheep for the last 10 to 15 years in our village, Malavalli. I have about 50 of them and they need great care."

— Mohammed Yacoob

ತಾಯಿ ಬೇರಿನ ತಾಜಾ ಅರಿಶಿನ

ಇದೇ ನವೋದ್ಯಮ ವಿಭಾಗದಲ್ಲಿ ತಾಯಿ ಬೇರಿನ ಅರಿಶಿನ ಪುಡಿ ಆಕರ್ಷಣೆಯ ಕೇಂದ್ರವಾಗಿದೆ. ಸಾಮಾನ್ಯವಾಗಿ ಅರಿಶಿನ ತಯಾರಿಸುವವರು ಕೊಂಬುಗಳನ್ನು ಕತ್ತರಿಸಿ, ಬಣ್ಣ ಬರಿಸಲು ಬೇಯಿಸಿ ಒಣಗಿಸುತ್ತಾರೆ. ಆದರೆ, ಕೃಷಿ ಮೇಳದ ನವೋದ್ಯಮ ವಿಭಾಗದಲ್ಲಿ ಸಾಂಪ್ರದಾಯಿಕವಾದ ಅರಿಶಿನವನ್ನು ತಯಾರಿಸಿ ಪ್ರದರ್ಶನ ಮತ್ತು ಮಾರಾಟಕ್ಕೆ ಇಡಲಾಗಿದೆ. ಸಾಮಾನ್ಯ ಅರಿಶಿನ ಕೆ.ಜಿ.ಗೆ 130-200 ರೂ.ಗಳಾದರೆ, ತಾಯಿ ಬೇರಿನ ಅರಶಿನ ಅರ್ಧ ಕೆ.ಜಿ.ಗೆ 249 ರೂ. ಬೆಲೆಯಿದೆ. ಸಾಮಾನ್ಯವಾಗಿ ಅರಿಶಿನ ಪುಡಿಯನ್ನು ಎರಡರಿಂದ ಮೂರು ತಿಂಗಳ ಕಾಲ ಇಡಬಹುದು. ನಂತರ ಅದರಲ್ಲಿ ಹುಳಗಳು ಬೀಳುತ್ತವೆ. ಆದರೆ, ಈ ಅರಿಶಿನವನ್ನು ಸುಮಾರು ಒಂದು ವರ್ಷದವರೆಗೆ ಸಂಗ್ರಹಿಸಿಡಬಹುದು. ತೇವಾಂಶ ಹೋಗದಂತೆ ಫ್ರಿಡ್ಜ್‌ನಲ್ಲಿಟ್ಟು ಬಳಸಬೇಕು. ಇದರಲ್ಲಿ ಕುರ್ಕುಮಿನ್ ಅಂಶ ಹೆಚ್ಚಾಗಿದ್ದು, ಔಷಧೀಯ ಗುಣಗಳನ್ನು ಸಮೃದ್ಧವಾಗಿ ಹೊಂದಿದೆ. ಕ್ಯಾನ್ಸರ್ ನಿಯಂತ್ರಣಕ್ಕೂ ಈ ಅರಿಶಿನ ತುಂಬಾ ಉತ್ತಮ ಎನ್ನುತ್ತಾರೆ ಎಜಿಆರ್ ಸಂಸ್ಥೆಯ ಸಿಬ್ಬಂದಿ. ಇದನ್ನು ಮೇಳಕ್ಕೆ ಬಂದವರು ತಾಯಿಬೇರಿನ ಅರಿಶಿನದ ಬಗ್ಗೆ ಮಾಹಿತಿ ಪಡೆದು, ಕೆಲವರು ಖರೀದಿಯಲ್ಲೂ ತೊಡಗಿದ್ದರು.



04-11-2022
V-karnataka Pg 06

04-11-2022
Ind Exp Pg 02

For more information visit
University Library Website
Web - uasbagrilibindia.org
E-mail- librarian@uasbangalore.edu.in

The inspiring life of a woman farmer

B.S. Satish Kumar
BENGALURU

M. Kavitha, a woman farmer from Holenarsipur taluk, through direct marketing and value addition, has managed to not only double her revenue but also pay a salary of ₹35,000 per month to her graduate son to manage her farm.

Ms. Kavitha's experiments with agriculture began after she was married. Her husband was working elsewhere, though the family had nine acres of land including four acres of rocky land.

She convinced her husband to quit his job and take up farming.

"I tried to prepare the rocky area for farming for nearly five years by raising loans. I managed to grow sugarcane, but the sugar factory itself shut when the crop was about to be harvested," she recounts.

This devastated her, but she remembered her father's advise that mother



> I started raring country chicken. While others sell chicken at ₹450 a kg, I get ₹900 a kg as I value add by preparing chicken dishes and selling them to hotels and factory staff twice a week.
>
> **M. KAVITHA**
> A farmer from Holenarsipur taluk

earth does not let anyone who trust her.

"So I decided to give one more try and bought a jersy cow by raising loans. Within three years, the number of milking cows increased to 10 and I was able to get nearly 200 litres of milk a day for some time," she noted. Her financial position slowly improved.

"I started raring country chicken. While others sell chicken at ₹450 a kg, I get ₹900 a kg as I value add by preparing chicken dishes and selling them to hotels and factory staff twice a week," she said.

She makes value addition to her agri produce by preparing papads, pickles and ragi malt.

"I sell these products at weekly shandies directly to consumers so that I get remunerative prices," she said. Ms. Kavitha, who is cultivating banana on four acres, is also selling the produce through direct marketing.

She has managed to convince her son, who was working in city for a salary of ₹20,000, to farming. "I pay him ₹35,000 a month for assisting me in farming," she said.

Ms. Kavitha was on Thursday honoured at the University of Agricultural Sciences-Bengaluru's Krishi Mela with the Canara Bank State-level best woman farmer award.

Other awardees

C. Navikram of Lakshmidevipura of Doddaballapur taluk, who was honoured with Dr. M.H. Mari Gowda best State-level horticulture farmer award, and C.P. Krishna of Goluru Doddi in Maddur taluk, who was honoured with Canara Bank best farmer award, at the UAS-B's Krishi Mela have also demonstrated the positive impact of direct marketing on farmers' economy.

Mr. Krishna earns over ₹1 lakh an acre from sugarcane cultivation as he makes jaggery and sells it directly to farmers.

ಕೊಟ್ಟಿಗೆ ಕ್ಲೀನ್‌ಗೂ ಸೋಲಾರ್ ಯಂತ್ರ

■ ರವಿಕುಮಾರ ಬಿಟ್ಟಿದಪುರ ಬೆಂಗಳೂರು
ravi.kumar6@timesgroup.com

ಹೈನುಗಾರಿಕೆ ಮಾಡುವ ರೈತರಿಗೆ ನಿತ್ಯ ಹಾಲು ಕರೆಯುವುದು, ಕೊಟ್ಟಿಗೆ ಸ್ವಚ್ಛಗೊಳಿಸುವುದೇ ತುಂಬಾ ತ್ರಾಸದ ಕೆಲಸ. ಇಂತಹ ರೈತರಿಗೆ ಅನುಕೂಲವಾಗುವಂತೆ ಸೋಲಾರ್ ಆಧಾರಿತ ಹಾಲು ಕರೆಯುವ ಮತ್ತು ಕೊಟ್ಟಿಗೆ ಸ್ವಚ್ಛಗೊಳಿಸುವ ಯಂತ್ರಗಳು ಕೃಷಿ ಮೇಳದಲ್ಲಿ ರೈತರ ಗಮನಸೆಳೆಯುತ್ತಿವೆ.

ಬೆಂಗಳೂರು ಕೃಷಿ ವಿವಿ ಆಯೋಜಿಸಿರುವ ಕೃಷಿ ಮೇಳದಲ್ಲಿ ಸ್ಮಾರ್ಟ್ ಆಗ್ರೋ ಮೆಷಿನರೀಸ್‌ನಿಂದ ಸಂಶೋಧನೆ ಮಾಡಿರುವ ಸೋಲಾರ್ ಮಿಲ್ಕಿಂಗ್ ಮಷಿನ್ ಪ್ರದರ್ಶನಕ್ಕಿಡಲಾಗಿದೆ. ವಿದ್ಯುತ್ ಅಥವಾ ಇಂಧನವಿಲ್ಲದೇ ಸೋಲಾರ್ ಪವರ್‌ನಿಂದಲೇ ಹಾಲು ಕರೆಯುವ ಮತ್ತು ಹಸು- ಕೊಟ್ಟಿಗೆ ತೊಳೆಯುವ ಯಂತ್ರ ಇದಾಗಿದೆ. ಬ್ಯಾಟರಿ ಬ್ಯಾಕಪ್‌ನೊಂದಿಗೆ ಹಾಲು ಕರೆಯುವುದರ ಜತೆಗೆ, ನಾಲ್ಕು ಲೈಟ್‌ಗಳನ್ನೂ ಉರಿಸಬಹುದು ಎಂದು ಸಂಶೋಧಕ ಚಿಕ್ಕಗೊಲ್ಲರಹಟ್ಟಿಯ ನಾಗರಾಜ್ ತಿಳಿಸಿದರು.

ನಾಲ್ಕೇ ಪ್ಯಾನೆಲ್ ಸಾಕು!: ಸೋಲಾರ್ ಕಿರಣಗಳನ್ನು ಹೀರಿಕೊಳ್ಳಲೆಂದು ನಾಲ್ಕು ಸೋಲಾರ್ ಪ್ಯಾನಲ್‌ಗಳನ್ನು ಮನೆ ಮೇಲೆ ಅಳವಡಿಸಿಕೊಳ್ಳಲು ನೀಡಲಾಗುವುದು. ಇವು 375 ವ್ಯಾಟ್ ಪ್ಯಾನಲ್‌ಗಳಾಗಿರುತ್ತವೆ. 200 ಎ.ಎಚ್. ಬ್ಯಾಟರಿಯನ್ನು ಈ ಸೌರಶಕ್ತಿ ಯಂತ್ರ ಹೊಂದಿರುತ್ತದೆ. ಒಮ್ಮೆ ಸೌರಶಕ್ತಿ ಕಿರಣ ಹೀರಿಕೊಂಡರೆ 8 ಗಂಟೆ ಬ್ಯಾಟರಿ ಬ್ಯಾಕಪ್ ಇರುತ್ತದೆ. 1.5 ಎಚ್.ಬಿ. ಡಿಸಿಯುಳ್ಳ ಮೋಟಾರ್ ಹೊಂದಿರುತ್ತದೆ.

ಒಂದೇ ಬಾರಿಗೆ ಎರಡು ಹಸುಗಳಲ್ಲಿ ಹಾಲು ಕರೆಯಬಹುದು. ಸುಮಾರು 1 ರಿಂದ 7 ನಿಮಿಷದೊಳಗೆ ಹಸುವಿನಲ್ಲಿ ಹಾಲು ಕರೆಯಬಹುದು. ಒಮ್ಮೆ ಬ್ಯಾಟರಿ ರೀಚಾರ್ಜ್ ಮಾಡಿಕೊಂಡರೆ 40 ಹಸುಗಳಲ್ಲಿ ಹಾಲು ಕರೆಯಬಹುದಾಗಿದೆ. ಇದರ ಬೆಲೆ 2.5 ಲಕ್ಷ ರೂ. ಶೀಘ್ರದಲ್ಲೇ ಇದನ್ನು ಕೃಷಿ ಇಲಾಖೆಯಲ್ಲೂ ಪರಿಚಯಿಸಿ ರೈತರಿಗೆ ಅನುಕೂಲವಾಗುವಂತೆ ಸಬ್ಸಿಡಿ ನೀಡುವ



ಚಿಂತನೆಯೂ ನಡೆಯುತ್ತಿದೆ.

ಈ ಹಿಂದಿನಿಂದಲೂ ಇರುವ ಡೀಸೆಲ್ ಮತ್ತು ವಿದ್ಯುತ್ ಚಾಲಿತ ಮಿಲ್ಕಿಂಗ್ ಯಂತ್ರಗಳನ್ನು ಪ್ರದರ್ಶನಕ್ಕಿಡಲಾಗಿತ್ತು. ಅಲ್ಲದೆ, ಹಸುಗಳಿಗೆ ಹುಲ್ಲು ಕತ್ತರಿಸುವ ಚಾಪ್ ಕಟ್ಟಿಂಗ್ ಯಂತ್ರಗಳನ್ನು ಪ್ರದರ್ಶನಕ್ಕಿಡಲಾಗಿತ್ತು. ಇನ್ನು ಹಸುಗಳಿಗೆ ಸ್ನಾನ ಮಾಡಿಸುವ ಸೋಲಾರ್ ಬ್ರಷ್‌ಗಳು, ಮೇವು ಕತ್ತರಿಸುವ ಡೀಸೆಲ್ ಚಾಲಿತ ಯಂತ್ರಗಳು, ಕೊಟ್ಟಿಗೆ ತೊಳೆಯುವ ಯಂತ್ರಗಳನ್ನು ಪ್ರದರ್ಶನ ಮತ್ತು ಮಾರಾಟಕ್ಕಿಡಲಾಗಿದೆ. ಇದಷ್ಟೇ ಅಲ್ಲದೇ, ಹಸುಗಳ ದೇಹಕ್ಕೆ ಯಾವುದೇ ರೀತಿಯ ಗಾಯ ಉಂಟಾಗದಿರಲು ಬಳಸುವ ಮ್ಯಾಟ್‌ಗಳು ಹಾಗೂ ಹಾಲು ಉತ್ಪಾದನೆ ಹೆಚ್ಚಳದ ಆಹಾರ ಪದಾರ್ಥಗಳು ಮತ್ತು ಮೇವು ಬತ್ತನೆ ಬೀಜಗಳು ಮೇಳದಲ್ಲಿವೆ.

ಹಸುಗಳಿಗೆ ಯಾವ ರೀತಿ ಹಾಗೂ ಯಾವ ಪ್ರಮಾಣದಲ್ಲಿ ಆಹಾರ ನೀಡಬೇಕು. ಎಷ್ಟೆಷ್ಟು ಪ್ರಮಾಣದಲ್ಲಿ ಆಹಾರ ನೀಡಬೇಕು ಎಂಬುದರ ಬಗೆಗೂ ರೈತರಿಗೆ ಮೇಳದಲ್ಲಿ ಸಿಗಲಿದೆ.

ತಂತ್ರಜ್ಞಾನವನ್ನು ಬಳಸಿ, ಆದಾಯ ಹೆಚ್ಚಿಸಿಕೊಳ್ಳಿ



ಬೆಂಗಳೂರು: ರೈತರು ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಉತ್ಪಾದನೆ ಹಾಗೂ ಆದಾಯವನ್ನು ದ್ವಿಗುಣಗೊಳಿಸಿಕೊಳ್ಳಬೇಕು ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಕರೆ ನೀಡಿದರು.

ರೈತರಿಗೆ ರಾಜ್ಯಪಾಲ ಗೆಹಲೋತ್ ಕರೆ

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ನಾಲ್ಕು ದಿನ ನಡೆಯಲಿರುವ ಕೃಷಿ ಮೇಳಕ್ಕೆ ಗುರುವಾರ ಚಾಲನೆ ನೀಡಿ ಮಾತನಾಡಿದ ಅವರು, ಕೃಷಿ ಮೇಳವು ಇತ್ತೀಚಿನ ಅಭಿವೃದ್ಧಿ ಹೊಂದಿದ ತಂತ್ರಜ್ಞಾನಗಳನ್ನು ಪ್ರದರ್ಶಿಸಲು ಮತ್ತು ಕೃಷಿ ವಲಯದಲ್ಲಿನ ಇತ್ತೀಚಿನ ಬೆಳವಣಿಗೆಗಳ ಕುರಿತು ರೈತ ಸಮುದಾಯ ಮತ್ತು ಸಂಬಂಧಿತ ವಲಯಗಳಲ್ಲಿ ಜಾಗೃತಿ ಮೂಡಿಸುವ ಒಂದು ಅನನ್ಯ ಕಾರ್ಯಕ್ರಮವಾಗಿದೆ.

2

ತಂತ್ರಜ್ಞಾನವನ್ನು ಬಳಸಿ, ಆದಾಯ ಹೆಚ್ಚಿಸಿಕೊಳ್ಳಿ

➡ ೧ಕೃಷಿ ಮೇಳವು ಎಲ್ಲಾ ಸಂಭಾವ್ಯ ಪಾಲುದಾರರು ಮತ್ತು ತಂತ್ರಜ್ಞಾನಗಳನ್ನು ಒಂದೇ ಸ್ಥಳದಲ್ಲಿ ತಂದಿದೆ. ಇಲ್ಲಿ ರೈತರು ಪರಸ್ಪರ ಸಂವಹನ ನಡೆಸುವ ಮೂಲಕ ಮೌಲ್ಯಯುತ ಮಾಹಿತಿ, ತಂತ್ರಜ್ಞಾನ ಪಡೆಯಬಹುದು . ಈ ವರ್ಷ ಕೃಷಿ ಮೇಳವು ಕೃಷಿ ಯಂತ್ರೋಪಕರಣಗಳು, ಸಾವಯವ ಕೃಷಿ, ಪಶುಪಾಲನೆ, ಸುಗ್ಗಿಯ ನಂತರದ ತಂತ್ರಜ್ಞಾನಗಳು, ಎಫ್‌ಪಿಒಗಳು, ಸ್ವಸಹಾಯ ಗುಂಪುಗಳು, ಕೃಷಿ ಸಂಬಂಧಿತ ಪ್ರಕಟಣೆಗಳು ಮತ್ತು ನೇರ ಬೆಳೆ ಪ್ರಾತ್ಯಕ್ಷಿಕೆಗೆ ಸಂಬಂಧಿಸಿದ ವಿಶೇಷ ಆಕರ್ಷಣೆಗಳನ್ನು ಹೊಂದಿದೆ ಎಂದರು.

ಕೃಷಿ ವಲಯದಲ್ಲಿ ಸ್ವಾವಲಂಬಿಯಾಗಿಸಿ: ಭಾರತೀಯ ಕೃಷಿಯು ಇನ್ನೂ ಮಳೆ-ಆಧಾರಿತವಾಗಿದೆ ಮತ್ತು ಒಟ್ಟು ಬೆಳೆ ಪ್ರದೇಶದ ಮೂರನೇ ಎರಡರಷ್ಟು ಪ್ರದೇಶದಲ್ಲಿ ಮಳೆ-ಆಧಾರಿತ ಕೃಷಿಯನ್ನು ಮಾಡಲಾಗುತ್ತದೆ. ಪ್ರತಿ ಹನಿಗೆ ಹೆಚ್ಚಿನ ಬೆಳೆ ಪಡೆಯಲು, ಕೃಷಿಯಲ್ಲಿನ ಇತ್ತೀಚಿನ ತಂತ್ರಜ್ಞಾನ, ನೈಸರ್ಗಿಕ ಕೃಷಿ, ದೇಶೀಯ ಬೀಜಗಳ ಸಂರಕ್ಷಣೆ ಇತ್ಯಾದಿಗಳ ಬಗ್ಗೆ ಹೆಚ್ಚು ವಿವರವಾದ ಸಂಶೋಧನೆ ಮಾಡುವ ಅವಶ್ಯಕತೆಯಿದೆ . ಕೃಷಿ ವಲಯದಲ್ಲಿ ಸ್ವಾವಲಂಬಿಯಾಗಲು ಮತ್ತು ಜಾಗತಿಕ ಶಕ್ತಿಯಾಗಲು ಭಾರತವು ಕೃಷಿ, ಪಶುಸಂಗೋಪನೆ ಮತ್ತು ಆಹಾರ ಸಂಸ್ಕರಣೆಯ ಆಧುನೀಕರಣಕ್ಕೆ ಹೆಚ್ಚಿನ ಗಮನ ನೀಡಬೇಕಾಗಿದೆ ಹೇಳಿದರು.

ಹಸಿರು ಕ್ರಾಂತಿಯು ಕೃಷಿ ಉತ್ಪಾದನೆಯನ್ನು ಹೆಚ್ಚಿಸಿದಂತೆಯೇ, ಐಟಿ ಕ್ರಾಂತಿಯು ಭಾರತೀಯ ಕೃಷಿಯಲ್ಲಿ ಮುಂದಿನ ದೊಡ್ಡ ಹೆಜ್ಜೆಯಾಗಬಹುದು. ಭಾರತೀಯ ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳ ಅಭಿವೃದ್ಧಿಗಾಗಿ, ಕೃಷಿಯನ್ನು ಲಾಭದಾಯಕ ವ್ಯವಹಾರವನ್ನಾಗಿ ಮಾಡಲು ಮತ್ತು ರೈತರ ಆದಾಯವನ್ನು ಹೆಚ್ಚಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಯೋಜನೆಗಳನ್ನ ಜಾರಿ ಮಾಡಿದ್ದು, ಈ ಯೋಜನೆ ರೈತರು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕೃಷಿಸಾಧಕರಿಗೆ ಸನ್ಮಾನಿಸಿದ ರಾಜ್ಯಪಾಲರು, 2021-22ರಲ್ಲಿನೂತನ ತಳಿಗಳು ಮತ್ತು ತಾಂತ್ರಿಕತೆಗಳು ಹಾಗೂ ಕೃಷಿವಿಶ್ವವಿದ್ಯಾಲಯದ ಸಾಧಕ ಕೈಪಿಡಿ ಅನಾವರಣಗೊಳಿಸಿದರು. ಕೃಷಿ ವಿಶ್ವವಿದ್ಯಾಲಯ ಕುಲಪತಿ ಡಾ.ಎಸ್.ವಿ.ಸುರೇಶ್, ವಿಸ್ತರಣಾ ನಿರ್ದೇಶಕ ಕೆ.ನಾರಾಯಣಗೌಡ, ಸಂಶೋಧನಾ ನಿರ್ದೇಶಕ ಡಾ.ಕೆ.ಬಿ ಉಮೇಶ್ ಇದ್ದರು.



ಕೋಲಾರ ಮಾದರಿ ಅಳವಡಿಸಿಕೊಳ್ಳಿ

ಕೃಷಿ ಸಚಿವ ಬಿ.ಸಿ.ಪಾಟೀಲ್ ಮಾತನಾಡಿ, ಕೃಷಿ ಎಂದರೆ ಎಲ್ಲರೂ ಇಸ್ರೆಲ್ ಮಾದರಿ ಎನ್ನುತ್ತಾರೆ, ಆದರೆ ಇಸ್ರೆಲ್‌ಗಿಂತ ನಮ್ಮ ಕೋಲಾರ ಮಾದರಿ ಅತ್ಯಂತ ಶ್ರೇಷ್ಠವಾದುದು. ರಾಜ್ಯಾದ್ಯಂತ ಇದನ್ನು ಅಳವಡಿಸಿಕೊಂಡರೆ ಉತ್ಪಾದನೆ ದ್ವಿಗುಣಗೊಳಿಸಬಹುದು ಎಂದರು. ನಮ್ಮ ಸರ್ಕಾರ ಕೃಷಿ ವಿವಿಗಳಲ್ಲಿ ರೈತರ ಮಕ್ಕಳಿಗೆ ಇದ್ದ ಮೀಸಲಾತಿ ಪ್ರಮಾಣವನ್ನು ಶೇ.40ರಿಂದ ಶೇ.50ಕ್ಕೆ ಹೆಚ್ಚಿಸಿದೆ. ರೈತರ ಮಕ್ಕಳು ವಿದ್ಯೆಯಿಂದ ವಂಚಿತರಾಗಬಾರದು ಎಂಬ ಸದುದ್ದೇಶದಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರೈತ ವಿದ್ಯಾನಿಧಿ ಯೋಜನೆ ಜಾರಿಗೊಳಿಸಿದ್ದು, 9.77ಲಕ್ಷ ವಿದ್ಯಾರ್ಥಿಗಳಿಗೆ 421 ಕೋಟಿ ರೂ.ಬಿಡುಗಡೆ ಮಾಡಲಾಗಿದೆ. ರೈತರಿಗೆ ಇಂಧನ ಸಬ್ಸಿಡಿ, ಪಿಎಂ ಕಿಸಾನ್ ಸಮ್ಮಾನ್ ಯೋಜನೆ ಸೇರಿದಂತೆ ಕೇಂದ್ರ ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೊಳಿಸಿದೆ ಎಂದರು.

ರೈತ ಪ್ರಶಸ್ತಿ ಪ್ರದಾನ

ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ ಗೋಪಾಲಗೌಡ, ಎಚ್. ಎಂ.ಮರಿಗೌಡ ಪ್ರಶಸ್ತಿಯನ್ನು ನವಿಕ್ರಮ್, ಕೆನರಾ -ಬ್ಯಾಂಕ್ ಪ್ರಾಯೋಜಿತ ಅತ್ಯುತ್ತಮ ರೈತ ಪ್ರಶಸ್ತಿಯನ್ನು ಸಿ.ಪಿ.ಕೃಷ್ಣ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿಯನ್ನು ಎಂ. ಕವಿತಾ, ಡಾ.ಆರ್.ದ್ವಾರಕೀನಾಥ್ ಪ್ರಶಸ್ತಿಯನ್ನು ಎಂ.ಟಿ.ಮುನೇಗೌಡ, ಡಾ.ಆರ್.ದ್ವಾರಕೀನಾಥ್ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿಯನ್ನು ರಾಜೇಗೌಡ ಅವರಿಗೆ ಪ್ರದಾನ ಮಾಡಲಾಯಿತು.

04-11-2022
Hosadiganta Pg 08

04-11-2022
Vihayavani Pg 03

ಕಸದಲ್ಲಿಯೂ ರಸ ತೆಗೆಯುವ ಸವಾಲು | ಅರಣ್ಯ ಅಭಿವೃದ್ಧಿ ನಿಗಮದಿಂದ ಹೊಸ ಪ್ರಯತ್ನ

ಕೆಎಂಎಫ್ ಮಾದರಿಯಲ್ಲಿ ಉಪ ಉತ್ಪನ್ನ ತಯಾರಿ

■ ಶಿವಾನಂದ ತಗಡೂರು ಬೆಂಗಳೂರು

ಕೆಎಂಎಫ್ ಹಾದಿಯಲ್ಲಿ ಹೆಜ್ಜೆ ಇಡಲು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ತೀರ್ಮಾನಿಸಿದ್ದು, ಪ್ರತಿ ಉತ್ಪನ್ನಗಳಿಂದಲೂ ಉಪ ಉತ್ಪನ್ನ ತಯಾರಿಗೆ ಮುಂದಾಗಿದೆ.

ನಷ್ಟದಲ್ಲಿಯೇ ಇದ್ದ ನಿಗಮ, ಠೇವಣಿ ವಾಪಸ್ ಪಡೆದು ಸಿಬ್ಬಂದಿಗೆ ಸಂಬಳ ಕೊಡುವ ಸ್ಥಿತಿಗೆ ಬಂದಿತ್ತು. ಇದೀಗ ಶಿಸ್ತಿನ ಸುಧಾರಣಾ ಕ್ರಮ ಹಾಗೂ ಹೊಸ ಯೋಜನೆಗಳಿಂದ ಲಾಭಕ್ಕೆ ಮರಳುತ್ತಿದೆ. ಈ ಸವಾಲನ್ನು ನಿಗಮದ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಸಾಧಿಸಿರುವುದು ವಿಶೇಷ.

ರಬ್ಬರ್‌ನಲ್ಲಿಯೂ ಗ್ರೇಡ್: ರಬ್ಬರ್ ಉತ್ಪಾದನೆ ಬಳಿಕ ಅದನ್ನು ಗ್ರೇಡ್ ಮಾಡಿ ಅದರಲ್ಲಿ ಕೈ ಗ್ಲೋಸ್, ಬಲೂನ್, ಕಾಂಡಂ ಸೇರಿ ಹಲವು ಉತ್ಪನ್ನಗಳನ್ನು ಮಾಡಲು ನಿಗಮ ಮುಂದಾಗಿದೆ. ಈ ರೀತಿಯಲ್ಲಿ ರಬ್ಬರ್ ಉತ್ಪನ್ನಗಳಲ್ಲಿ ಉಪ ಉತ್ಪನ್ನಗಳನ್ನು ಮಾಡುತ್ತಿರುವುದು ಇದೇ ಮೊದಲು. ಈ ಉಪ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿಯೂ ಬೇಡಿಕೆ ಇರುವ ಕಾರಣ ನಿಗಮಕ್ಕೆ ಲಾಭವಾಗಲಿದೆ ಎಂದು ಅಂದಾಜಿಸಲಾಗಿದೆ.

ನೀಲಗಿರಿಯಲ್ಲೂ ಲಾಭ: ನೀಲಗಿರಿ ಮರವನ್ನು ಕತ್ತರಿಸಿದ ಬಳಿಕ ಅದರಲ್ಲಿನ ಬೇಗವಿರುವ ಭಾಗವನ್ನು ಮಾತ್ರ ಪೇಪರ್ ಉತ್ಪಾದನೆಗೆ ಕಳುಹಿಸಿ ಉಳಿದ ರೆಂಬೆ, ತುದಿ ಭಾಗವನ್ನು ಸ್ಥಳದಲ್ಲಿಯೇ ಬಿಡಲಾಗುತ್ತಿತ್ತು. ಇಂಥ ಅನುಪಯುಕ್ತ ಉತ್ಪನ್ನಗಳನ್ನು ಬಿಸಾಕುವ ಬದಲು ಅದನ್ನು ಉರುವಲು ಬ್ರಿಕ್ಸ್ ಮಾಡಲು ನಿಗಮ



> ಅಧ್ಯಕ್ಷೆಯಾಗಿ ಅಧಿಕಾರ ವಹಿಸಿಕೊಂಡಾಗ ನಿಗಮದ ಠೇವಣಿ ಪಡೆದು ಸಿಬ್ಬಂದಿಗೆ ಸಂಬಳ ನೀಡಲಾಗುತ್ತಿತ್ತು. ಹಲವು ಸುಧಾರಣಾ ಕ್ರಮ ತೆಗೆದುಕೊಂಡ ಪರಿಣಾಮ ನಿಗಮ ₹107 ಕೋಟಿ ಠೇವಣಿ ಇಟ್ಟಿರುವುದಲ್ಲದೆ, ಸಂಬಳ-ಸಾರಿಗೆ ಖರ್ಚು ನೀಡುವಷ್ಟು ಸ್ವಾವಲಂಬಿಯಾಗಿದೆ.
>
> ತಾರಾ ಅನುರಾಧ ಅಧ್ಯಕ್ಷೆ, ಅರಣ್ಯ ಅಭಿವೃದ್ಧಿ ನಿಗಮ

> ಕಾರ್ಖಾನೆಗಳು ಖರೀದಿಸುವ ಪಲ್ಪ್‌ವುಡ್ ಖರೀದಿ ಅತಿ ಕಡಿಮೆ ಬೆಲೆ ಇತ್ತು. ಅದನ್ನು ಪ್ರತಿ ಟನ್‌ಗೆ 1 ಸಾವಿರ ಹೆಚ್ಚಿಸಿ 6 ಸಾವಿರ ರೂ. ನಿಗದಿ ಮಾಡಲು ಅಧ್ಯಕ್ಷೆ ತಾರಾ ಅವರ ಶ್ರಮ ಕಾರಣ. ಹಲವಾರು ಸುಧಾರಣಾ ಕ್ರಮ ಕೈಗೊಂಡ ಹಿನ್ನೆಲೆಯಲ್ಲಿ ನಿಗಮ ಲಾಭಕ್ಕೆ ಬರಲು ಸಾಧ್ಯವಾಗಿದೆ.
>
> ಎ.ರಾಧಾದೇವಿ
> ವ್ಯವಸ್ಥಾಪಕ ನಿರ್ದೇಶಕಿ, ಅರಣ್ಯ ಅಭಿವೃದ್ಧಿ ನಿಗಮ

ತೀರ್ಮಾನಿಸಿದ್ದಲ್ಲದೆ, ಅದರ ಮಾರಾಟದಿಂದ ಲಾಭ ಪಡೆಯುತ್ತಿದೆ.

ನಿಗಮದ ಕಟ್ಟಡದಿಂದ ಬಾಡಿಗೆ: ನಿಗಮದ ಕಟ್ಟಡದಲ್ಲಿ ಸಾಕಷ್ಟು ಜಾಗ ವಿದ್ದ ಕಾರಣ ಖಾಲಿ ಜಾಗ ಉಪಯೋಗಕ್ಕೆ ಬರುತ್ತಿರಲಿಲ್ಲ. ನಿಗಮಕ್ಕೆ ಅಗತ್ಯವಿರುವ ಕಚೇರಿ ಜಾಗವನ್ನು ಮಾತ್ರ ಮೀಸಲಿಟ್ಟುಕೊಂಡು, ಸುಮಾರು 6 ಸಾವಿರ ಚದರಡಿ ಜಾಗವನ್ನು ಕಚೇರಿಗಾಗಿ ಜವಳಿ ಇಲಾಖೆಗೆ 6 ಲಕ್ಷ ರೂ.ಗೆ ಬಾಡಿಗೆಗೆ ನೀಡಲಾಗಿದೆ. ರೇಷ್ಮೆ ಇಲಾಖೆಗೆ ಮತ್ತೊಂದು ಅಂತಸ್ತಿನಲ್ಲಿ ಬಾಡಿಗೆ ನೀಡಲು ಉದ್ದೇಶಿಸಿದ್ದು, ಅದರಲ್ಲಿಯೂ 6 ಲಕ್ಷ ರೂ. ಬಾಡಿಗೆ ನಿರೀಕ್ಷಿಸಲಾಗಿದೆ.

10 ಸಾವಿರ ಹೆಕ್ಟೇರ್ ಬಾಕಿ: ಅರಣ್ಯ ಇಲಾಖೆಯಿಂದ ನಿಗಮಕ್ಕೆ 44 ಸಾವಿರಹೆಕ್ಟೇರ್ ಪ್ರದೇಶವನ್ನು ವಾರ್ಷಿಕ 1.2 ಕೋಟಿ ರೂ ಗುತ್ತಿಗೆಗೆ ನೀಡಲಾಗಿದೆ. ಇನ್ನೂ 10 ಸಾವಿರಹೆಕ್ಟೇರ್ ನೀಡಲು ನೀಡುವುದು ಬಾಕಿ ಇದೆ. ಈ ಪ್ರದೇಶವನ್ನೂ ನೀಡಿದರೆ ಅಭಿವೃದ್ಧಿ ಮಾಡಲು ನಿಗಮ ಸಿದ್ಧವಿದೆ.

ರಬ್ಬರ್‌ನಿಂದ 5 ಕೋಟಿ ರೂ.: ಅರಣ್ಯ ಅಭಿವೃದ್ಧಿ ನಿಗಮದಿಂದ 4 ಸಾವಿರ ಹೆಕ್ಟೇರ್ ಅನ್ನು ರಬ್ಬರ್ ಉದ್ಯಮಕ್ಕೆ ಮೀಸಲಿಡಲಾಗಿದೆ. ರಬ್ಬರ್ ಕಾರ್ಖಾನೆಯಿಂದ ಪ್ರತಿ ತಿಂಗಳು 5 ಕೋಟಿ ರೂ. ಬರುತ್ತಿದ್ದು, ಅದರಲ್ಲಿ ಖರ್ಚು ವೆಚ್ಚ ಕಳೆದರೂ ಸುಮಾರು 2 ಕೋಟಿ ರೂ. ಉಳಿಯುತ್ತಿದೆ. ಶ್ರೀಲಂಕಾದಿಂದ ಬಂದ 1400 ಕಾರ್ಮಿಕರು ರಬ್ಬರ್ ಉದ್ಯಮದಲ್ಲಿ ಕೆಲಸ ಮಾಡುತ್ತಿದ್ದು, ಇನ್ನೂ 489 ಕಾರ್ಮಿಕರು ಬೇಕಿದೆ. ಈ ಖಾಲಿ ಹುದ್ದೆಗಳಿಗೆ ಸ್ಥಳೀಯರಿಗೆ ಅವಕಾಶ ನೀಡಲು ಸರ್ಕಾರ ಮುಂದಾಗಿದೆ.

ನಗರದಲ್ಲಿದ್ದ ಮಗನ ಕೆಲಸ ಬಿಡಿಸಿ ಊರಿಗೆ ಕರೆಸಿಕೊಂಡ ಕವಿತಾ | ತಮ್ಮದೇ ಜಮೀನಿನಲ್ಲಿ ಪುತ್ರನಿಗೆ ಕೆಲಸ, ಕೈತುಂಬಾ ಸಂಬಳ

ತಾಯಿಯಿಂದಲೇ ಮಗನಿಗೆ ದುಪ್ಪಟ್ಟು ವೇತನದ ಕೊಡುಗೆ!

• ವಿಜಯಕುಮಾರ ಚಂದರಗಿ

ಬೆಂಗಳೂರು: ಕೃಷಿಯಲ್ಲಿ ಲಾಭಗಳಿಕೆಯೇ ಮರೀಚಿಕೆಯಾಗಿದೆ. ಹಾಗಾಗಿ, ರೈತರು ತಮ್ಮ ಮಕ್ಕಳನ್ನು ಪಟ್ಟಣಕ್ಕೆ ಕಳುಹಿಸುವುದು ಸಾಮಾನ್ಯ. ಆದರೆ, ಇಲ್ಲೊಬ್ಬ ತಾಯಿ ಪಟ್ಟಣದಲ್ಲಿದ್ದ ಮಗನನ್ನು ಹಳ್ಳಿಗೆ ಕರೆಸಿಕೊಂಡು, ತಮ್ಮದೇ ಜಮೀನಿನಲ್ಲೇ ಕೆಲಸ ನೀಡಿದ್ದಾರೆ. ಅಷ್ಟೇ ಅಲ್ಲ ಪಟ್ಟಣದಲ್ಲಿ ಅವನು ಪಡೆಯುತ್ತಿದ್ದದ್ದಕ್ಕಿಂತ ಹೆಚ್ಚು- ಕಡಿಮೆ ದುಪ್ಪಟ್ಟು ಸಂಬಳ ನೀಡುತ್ತಿದ್ದಾಳೆ!



ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ಬಂಟರತಳಾಲು ಗ್ರಾಮದ ಎಂ. ಕವಿತಾ ಕೃಷಿಯಲ್ಲಿ ಹಲವು ಪ್ರಯೋಗಗಳ ಮೂಲಕ ವಿನೂತನ ಸಾಧನೆ ಮಾಡಿದ್ದಾರೆ. 20 ಸಾವಿರ ರೂ. ಸಂಬಳಕ್ಕೆ ಹುಣಸೂರು ಪಟ್ಟಣದ ಬಾರ್‌ವೊಂದರಲ್ಲಿ ದುಡಿಯುತ್ತಿದ್ದ ಪದವೀಧರ ಮಗನ ಕೆಲಸ ಬಿಡಿಸಿ, ತನ್ನ ಜಮೀನಿನಲ್ಲೇ ದುಡಿಮೆಗೆ ಹಚ್ಚಿ ತಿಂಗಳಿಗೆ 35 ಸಾವಿರ ರೂ. ಸಂಬಳ ಪಾವತಿಸುತ್ತಿದ್ದಾರೆ.

ಇದು ಸಾಧ್ಯವಾಗಿದ್ದು ಕೃಷಿಯಲ್ಲಿ ಅನುಸರಿಸಿದ ವಿನೂತನ ವಿಧಾನಗಳಿಂದ. ಸಮಗ್ರ ಕೃಷಿ ಪದ್ಧತಿ ಅನುಸರಿಸುತ್ತಿರುವ ಅವರು, ಎಲ್ಲರಂತೆ ಕೋಳಿ ಸಾಕಾಣಿಕೆ ಮಾಡುತ್ತಿದ್ದಾರೆ. ಆದರೆ, ಅವುಗಳ ಮಾರಾಟ ವಿಧಾನ ವಿಭಿನ್ನವಾಗಿದೆ. ಸುತ್ತಲಿನ ಹೋಟೆಲ್‌ಗಳು, ಸಂಘ-ಸಂಸ್ಥೆಗಳು, ಕಚೇರಿಗಳಿಂದ ಕೋಳಿ ಊಟದ ಆರ್ಡರ್ ಪಡೆಯುವ ಕವಿತಾ, ತಾವು ಸಾಕಿದ ಕೋಳಿಗಳಿಂದ ತರಹೇವಾರಿ ಅಡುಗೆ ತಯಾರಿಸಿ ಪೂರೈಸುತ್ತಾರೆ. ಇದರಿಂದ ದುಪ್ಪಟ್ಟು ಆದಾಯ ಬರುತ್ತಿದೆ ಎನ್ನುತ್ತಾರೆ ಎಂ. ಕವಿತಾ.

'ಈಗ ಜಮೀನಿನಲ್ಲಿ ಕೃಷಿ ಹೊಂಡದಲ್ಲಿ ಮೀನು ಸಾಕಾಣಿಕೆ ಮಾಡುತ್ತೇನೆ. ಅದರಿಂದ ಮೀನು ಊಟ ತಯಾರಿಸಿ ಪೂರೈಸಬಹುದು ಎನ್ನುವ ಕಲ್ಪನೆ ಅವರದು. ಕವಿತಾರ ಸಾಧನೆ ಗುರುತಿಸಿ, ಗುರುವಾರ ಬೆಂಗಳೂರಿನಲ್ಲಿ ನಡೆದ ಕೃಷಿ ಮೇಳದಲ್ಲಿ ಅವರಿಗೆ ಕೆನರಾ ಬ್ಯಾಂಕ್ ರಾಜ್ಯ ಮಟ್ಟದ 'ಅತ್ಯುತ್ತಮ ರೈತಮಹಿಳೆ' ಪ್ರಶಸ್ತಿ ನೀಡಿ ಗೌರವಿಸಿತು.

ನಾನ್‌ವೆಜ್ ಅಡುಗೆ

'ನಾನು ಆಗಷ್ಟೇ ಹೈನುಗಾರಿಕೆ ಆರಂಭಿಸಿದೆ. ಅದರಿಂದ ತಾಲ್ಲೂಕು ಮಟ್ಟದಲ್ಲಿ ಆತ್ಮ ಯೋಜನೆ ಅಡಿ 10 ಸಾವಿರ ನಗದು ಪ್ರಶಸ್ತಿ ಬಂದಿತ್ತು. ಆ ಹಣದಿಂದ 5 ಹುಂಜ, 15 ಕೋಳಿ ಖರೀದಿಸಿದೆ. ಅದರಿಂದ ಒಂದು ವರ್ಷದಲ್ಲಿ 180 ಕೋಳಿಗಳಾದವು. ಆ ಕೋಳಿ ಮತ್ತು ಮೊಟ್ಟೆ ಮಾರಾಟ ಮಾಡಲಿಲ್ಲ. ಬದಲಿಗೆ ಹೊಸ ರೀತಿ ಮೌಲ್ಯವರ್ಧನೆ ಮಾಡಿದೆ. ಹೇಗೆಂದರೆ, ಸುತ್ತಲಿನ ಕಚೇರಿಗಳು, ಫ್ಯಾಕ್ಟರಿಗಳಿಗೆ, ಹೋಟೆಲ್ ಗಳಿಗೆ ಕ್ಯಾಟರಿಂಗ್ ಶುರು ಮಾಡಿದೆ. ಪ್ರತಿ ಭಾನುವಾರ, ಮಂಗಳವಾರ ನಾನ್‌ವೆಜ್ ಅಡುಗೆ ತಯಾರಿಸಿ ಪೂರೈಸುತ್ತೇನೆ' ಎಂದು ತಮ್ಮ ಯಶೋಗಾಥೆ ವಿವರಿಸಿದರು.

04-11-2022
Udayavani Pg 01

₹ 6 ಲಕ್ಷ ಬೆಲೆಯ ಕುರಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚರ್ಮಗಂಟು ರೋಗದ ಕಾರಣಕ್ಕೆ ಬೆಂಗಳೂರು ಕೃಷಿ ವಿವಿ ಆಯೋಜಿಸಿರುವ 'ಕೃಷಿ ಮೇಳ'ದಲ್ಲಿ ಜಾನುವಾರು ಪ್ರದರ್ಶನಕ್ಕೆ ನಿರ್ಬಂಧ ಹೇರಿರುವುದು ರೈತರಿಗೆ ನಿರಾಸೆ ಮೂಡಿಸಿದ್ದರೂ ಮೇಳದಲ್ಲಿನ ವಿದೇಶಿ ಹಾಗೂ ದೇಶೀಯ ಕುರಿ ತಳಿಗಳು ಆಕರ್ಷಿಸುತ್ತಿವೆ. ಅವುಗಳ ಬೆಲೆ ಕೇಳಿದರೂ ಒಮ್ಮೆ ಅಚ್ಚರಿ ಆಗಲಿದೆ. ಒಂದಕ್ಕಿಂತ ಮತ್ತೊಂದು ತಳಿಗಳು ಭಿನ್ನವಾಗಿವೆ.

ಈ ತಳಿಗಳನ್ನು ಮಾಂಸಕ್ಕಾಗಿ ಸಾಕಣೆ ಮಾಡುವುದು ಕಡಿಮೆ ಆಗಿದ್ದರೂ ತಳಿಯ ಅಭಿವೃದ್ಧಿಗೆ ವಿವಿಧ ಫಾರಂನಲ್ಲಿ ಸಾಕಾಣಿಕೆ ಮಾಡಲಾಗುತ್ತಿದೆ. ಅವುಗಳನ್ನು ವೀಕ್ಷಿಸಬೇಕಿದ್ದರೆ ಜಿ.ಕೆ.ವಿ.ಕೆ ಆವರಣಕ್ಕೆ ಬರಬೇಕು.

ಮೇಳದಲ್ಲಿ ₹ 6 ಲಕ್ಷ ಮೌಲ್ಯದ ದಕ್ಷಿಣ ಆಫ್ರಿಕಾ ಮೂಲದ 'ಡಾರ್ಪರ್' ಕುರಿ ತಳಿ, ₹ 2 ಲಕ್ಷ ಬೆಲೆಯ 'ಡುಂಬ' ಕುರಿ ತಳಿ ಗಮನ ಸೆಳೆಯುತ್ತಿದೆ.

ಇದರೊಂದಿಗೆ ಮಂಡ್ಯ ಜಿಲ್ಲೆಯ ದಾಸನದೊಡ್ಡಿಯ ಪಾಪಣ್ಣಗೌಡ ಕುರಿ ಫಾರಂನ ಬಂಡೂರು ಕುರಿಯೂ ಮೇಳದಲ್ಲಿದೆ. ಬಂಡೂರದ ಮರಿಗೆ ₹ 15ರಿಂದ ₹ 20 ಸಾವಿರ ಬೆಲೆಯಿದ್ದರೆ ದೊಡ್ಡಗಾತ್ರದ ಕುರಿಗೆ ₹ 80ರಿಂದ ₹ 90 ಸಾವಿರದ ತನಕ ಬೆಲೆಯಿದೆ ಎನ್ನುತ್ತಾರೆ ಸಾಕಾಣಿಕೆದಾರರು.


ಜಮುನಾಪಾರಿ ಮೇಕೆ

'ರೈತರ ಪಾಲಿಗೆ ಕುರಿಗಳು ನಡೆದಾಡುವ ಬ್ಯಾಂಕ್‌ಗಳು...' ಎಂದೇ ಕರೆಯಲಾಗುತ್ತಿದ್ದು ಮೇಳದಲ್ಲಿ ಎತ್ತರ ಚಿತ್ತ ಇವುಗಳತ್ತ ಹರಿದಿದೆ.

1930ರಲ್ಲಿ ಡಾರ್ಸಟ್ ಹಾನ್ಸ್ ಹಾಗೂ ಕಪ್ಪುತಲೆ ಪರ್ಶಿಯನ್ ಕುರಿಯಿಂದ ಡಾರ್ಪರ್ ತಳಿ ಅಭಿವೃದ್ಧಿ ಪಡಿಸಲಾಗಿದೆ. ಯಲಹಂಕದ ಮಾರೇನಹಳ್ಳಿಯ ಸಿಂಚನಾ ಮೇಕೆ, ಕುರಿ ಫಾರಂ, ತುಮಕೂರು ಜಿಲ್ಲೆ ಸುಂಕದಹಳ್ಳಿಯ ಬಿಆರ್‌ಎಸ್ ಫಾರಂನಿಂದ ಡಾರ್ಪರ್ ತಳಿ ತರಲಾಗಿದೆ.

'ಡಾರ್ಪರ್ ತಳಿ ಕುರಿಯಲ್ಲೇ ಉತ್ಕೃಷ್ಟ ತಳಿ. ಇವುಗಳಿಗೆ ಕೊಂಬು ಇರುವುದಿಲ್ಲ. ಉದ್ದನೆ ದೇಹಾಕೃತಿ ಹೊಂದಿದ್ದು, ಕಡಿಮೆ ಕೂದಲು ಇರಲಿದೆ. ಕುರಿ ಬೆಳೆದಂತೆ ಕೂದಲು ಉದುರಿ ಬೀಳಲಿದೆ' ಎಂದು ಕುರಿ ಸಾಕಾಣಿಕೆದಾರ ಸತೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಈ ತಳಿಯನ್ನು ಮಾಂಸ ಹಾಗೂ ಆಸಕ್ತಿಗೆ ಸಾಕಾಣಿಕೆ ಮಾಡುತ್ತಾರೆ. ಡಾರ್ಪರ್ ತನ್ನ ದೇಹದ ತೂಕವನ್ನು 3ರಿಂದ 4 ತಿಂಗಳಲ್ಲಿಯೇ 30ರಿಂದ 40 ಕೆ.ಜಿಯಷ್ಟು ಹೆಚ್ಚಿಸಿಕೊಳ್ಳತ್ತವೆ. ಕೊಬ್ಬು ಕಡಿಮೆ. ಮಾಂಸ ಮೃದು. ಕಡಿಮೆ ಸಮಯದಲ್ಲಿ ಖಾದ್ಯ ತಯಾರಿಸಲು ಸಾಧ್ಯ. ಹೆಣ್ಣುಕುರಿ 70ರಿಂದ 80 ಕೆ.ಜಿಯಿದ್ದರೆ, ಗಂಡು ಕುರಿ ಕೆ.ಜಿ.ಯಷ್ಟು ಇರಲಿದೆ' ಎಂದು ಹೇಳಿದರು.

ಮಾಂಸ ಸೇವನೆಯಿಂದ ರೋಗ ದೂರ: 'ಡುಂಬ ಕುರಿಗಳು ಉತ್ತಮ ದೇಹ ರಚನೆ, ಉದ್ದವಾದ ಕಾಲು ಹಾಗೂ ದಪ್ಪ ಬಾಲದ ಜತೆಗೆ ಬಿಳಿ ಬಣ್ಣವನ್ನು ಹೊಂದಿದೆ. ಇದರ ಮಾಂಸ ಸೇವನೆಯಿಂದ ಪಾರ್ಶ್ವವಾಯು ಹಾಗೂ ಹೃದ್ರೋಗ ಅಪಾಯ ಕಡಿಮೆ ಆಗಲಿದೆ' ಎಂದು ಕುರಿ ಸಾಕಾಣಿಕೆದಾರರು ಹೇಳುತ್ತಾರೆ.


ಕೃಷಿ ಮೇಳಕ್ಕೆ ತಂದಿರುವ ಬಿಆರ್‌ಎಸ್ ಫಾರಂನ ಡಾರ್ಪರ್ ಕುರಿ ತಳಿ

04-11-2022
Prajavani Pg 3A